ಅರಣ್ಯ ಇಲಾಖೆಯಿಂದ ನೆಡಲಾದ ಗಿಡಗಳು

7:(472), ಶ್ರೀ ದಿನೇಶ್ ಗುಂಡೂರಾವ್(ಗಾಂಧಿನಗರ)

ಪ್ರಶ್ನೆ

ಅ) ಕಳೆದ ಮೂರು ವರ್ಷಗಳಿಂದ ಅರಣ್ಯ ಇಲಾಖಾವತಿಯಿಂದ ಎಷ್ಟು ಗಿಡಗಳನ್ನು ನೆಡಲಾಗಿದೆ (ವರ್ಷವಾರು ವಿವರಗಳನ್ನು ನೀಡುವುದು);

ಆ) ನೆಟ್ಟಗಿಡಗಳ ಪೈಕಿ ಎಷ್ಟು ಮರಗಳು ಬೆಳೆದಿವೆ ಹಾಗೂ ಎಷ್ಟು ನಾಶವಾಗಿವೆ;

ಇ) ಗಿಡ ಮರಗಳನ್ನು ನೆಟ್ಟ ನಂತರ ಸರಿಯಾದ ಪೋಷಣೆ ಇಲ್ಲದೇ ನಾಶವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಇದಕ್ಕೆ ಸರ್ಕಾರವು ಕೈಗೊಂಡಿರುವ ಕ್ರಮಗಳೇನು?

ಶ್ರೀ ಸಿ.ಪಿ.ಯೋಗೇಶ್ವರ(ಮಾನ್ಯ ಅರಣ್ಯ ಸಚಿವರು)

ಉತ್ತರ

ಅ) ಕಳೆದ ಮೂರು ವರ್ಷಗಳಲ್ಲಿ ಇಲಾಖಾವತಿಯಿಂದ ನೆಟ್ಟ ಗಿಡಗಳ ಸಂಖ್ಯೆ ಕೆಳಗಿನಂತಿದೆ:

ಕ್ರಮ. ಸಂಖ್ಯೆ	ವರ್ಷ	ನೆಟ್ಟ ಗಿಡಗಳ ಸಂಖ್ಯೆ (ಲಕ್ಷಗಳಲ್ಲಿ)
1	2009–10	636.842
2	2010–11	827.887
3	2011–12	620.870

ಆ) ಸಾಮಾನ್ಯವಾಗಿ ಎಲ್ಲಾ ನೆಡುತೋಪುಗಳನ್ನು 3 ರಿಂದ 5 ವರ್ಷಗಳವರೆವಿಗೆ ಪೋಷಣೆ ಮಾಡಲಾಗುತ್ತದೆ, ಆದಾಗ್ಯೂ ಈ ಅವಧಿಯ ನಂತರ ಉಳಿಯುವ ಸಸಿಗಳು ಮಾತ್ರ ನಿಖರವಾಗಿ ಬೆಳೆಯುವ ಮತ್ತು ಮರಗಳಾಗಿ ಸ್ಥಾಪಿತವಾಗುವುದೆಂದು ಪರಿಗಣಿಸಬಹುದು. ಆದ್ದರಿಂದ, ಮೂರು ವರ್ಷಗಳ ಮೇಲ್ಪಟ್ಟ ನೆಡುತೋಪುಗಳಲ್ಲಿ ಬದುಕಿ ಉಳಿದಿರುವ ಗಿಡಗಳ ಬಗ್ಗೆ ಇಲಾಖಾವತಿಯಿಂದ ನೆಡುತೋಪುಗಳ ಮೌಲ್ಯಮಾಪನಗಳನ್ನು ಕೈಗೊಳ್ಳಲಾಗುತ್ತಿದ್ದು, ಆಂತರಿಕ ಮೌಲ್ಯ ಮಾಪನ ಮಾಡಲಾಗುತ್ತದೆ. ಅದರಂತೆ 2004–05, 2005–06 ಮತ್ತು 2006–07ರ ಮೌಲ್ಯಮಾಪನ ವರದಿಯಂತೆ ರಾಜ್ಯಾದ್ಯಂತ ನೆಡುತೋಪುಗಳಲ್ಲಿ ಉಳಿದಿರುವ ಸಸಿಗಳು ಶೇಕಡವಾರು 65.06 ಆಗಿರುತ್ತದೆ.

ಇ) ಇಲಾಖೆಯಿಂದ ಬೆಳೆಸಿದ ನೆಡುತೋಪುಗಳನ್ನು ಸಾಮಾನ್ಯವಾಗಿ ನೆಟ್ಟನಂತರ 3 ರಿಂದ 5 ವರ್ಷಗಳವರೆವಿಗೂ ಪೋಷಣೆ ಮಾಡುವುದು ವಾಡಿಕೆಯಲ್ಲಿದೆ. ಈ ಅವಧಿಯ ನಂತರ ನೆಡುತೋಪುಗಳ ಪೋಷಣೆ ಮಾಡುವ ಅವಕಾಶವಿರುವುದಿಲ್ಲ. ಕೆಲವೊಂದು ವರ್ಷಗಳಲ್ಲಿ ಮಳೆ ಸರಿಯಾಗಿ ಬಾರದೆ ಇರುವುದರಿಂದಲೂ ಹಾಗೂ ಮೇವಿಗಾಗಿ ಜಾನುವಾರುಗಳ ಹಾವಳಿಯಿಂದಲೂ ಹಾಗೂ ಬೇಸಿಗೆ ಕಾಲದಲ್ಲಿ ಬೆಂಕಿಯ ಹಾವಳಿಯಿಂದಲೂ ಕೆಲವೊಂದು ಗಿಡಗಳು ನಾಶವಾಗಿರುವ ಸಂಭವ ಉಂಟು, ಆದರೆ ಯಾವುದೇ ಕಾರಣದಿಂದ ನೆಡುತೋಪುಗಳ ರಕ್ಷಣೆ ಕಾರ್ಯದಲ್ಲಿ ಇಲಾಖೆಯವತಿಯಿಂದ ನಿರ್ಲಕ್ಷತೆ ಇರುವುದಿಲ್ಲ. ಇಲಾಖೆಯಲ್ಲಿ ಅರಣ್ಯ ವೀಕ್ಷಕರು, ಅರಣ್ಯ ರಕ್ಷಕರು, ವನಪಾಲಕರು ರಕ್ಷಣಾಕಾರ್ಯದಲ್ಲಿ ನಿರಂತರವಾಗಿ ತೊಡಗಿರುತ್ತಾರೆ.

ನಿಯಮ ಉಲ್ಲಂಘನೆ

38 (456), **ಶ್ರೀ ಮಂಜುನಾಥ್. ಹೆಚ್.ಪಿ. (ಹುಣಸೂರು)**

ಪ್ರಶ್ನೆ

ಅ) ಗಿರಿಜನ ಪುನರ್‌ವಸತಿ ಯೋಜನೆಯಡಿಯಲ್ಲಿ ಮೈಸೂರು ಜಿಲ್ಲೆಯ ಬಂಡೀಪುರ ಹಾಗೂ ನಾಗರಹೊಳೆ ರಾಜೀವ್‌ಗಾಂಧಿ ರಾಷ್ಟ್ರೀಯ ಉದ್ಯಾನವನ ಕಾಡಿನಲ್ಲಿ ವಾಸಿಸುತ್ತಿದ್ದ ಗಿರಿಜನರ ಪುನರ್ ವಸತಿ ಯೋಜನೆಯಡಿಯಲ್ಲಿ 1999 ರಿಂದ ಈವರೆಗೆ ಕೇಂದ್ರ ಪುರಸ್ಕೃತ ಅನುದಾನದಲ್ಲಿ ಅನುಷ್ಠಾನ ಸಂಬಂಧ ನಡೆದಿರುವ ಕಾರ್ಯಚಟುವಟಿಕೆಗಳಲ್ಲಿ ಅರಣ್ಯ ಲೆಕ್ಕ ಸಂಹಿತೆ ಹಾಗೂ ಸಾರ್ವಜನಿಕ ಲೆಕ್ಕನಿರ್ವಹಣೆ ಮತ್ತು ತಪಾಸಣಾ ನಿಯಮಾವಳಿಗಳ ಉಲ್ಲಂಘನೆಯಾಗಿದ್ದು, ಈ ಬಗ್ಗೆ ಸಾರ್ವಜನಿಕ ಲೆಕ್ಕಪತ್ರ ಸಮಿತಿಯು ಸಮಗ್ರವಾಗಿ ಅವಲೋಕಿಸಿ, ಪರಿಶೀಲಿಸಿ, ಸಂಬಂಧಪಟ್ಟವರಿಂದ ವಿವರಣೆ ಪಡೆದು ಕ್ರಮವಾಗಿ ಸರ್ಕಾರಕ್ಕೆ ಸಲ್ಲಿಸಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? (ಬಂದಿದ್ದಲ್ಲಿ ಪೂರ್ಣ ವಿವರ ನೀಡುವುದು) ;

ಆ) ಹಾಗಿದ್ದಲ್ಲಿ, ಸಾಕಷ್ಟು ಸಭೆಗಳು ನಡೆದು ಚರ್ಚಿಸಿ ಅಂಗೀಕರಿಸಿದ ನಿರ್ಣಯಗಳನ್ನು ಜಾರಿಗೆ ತರದೆ ಉಪೇಕ್ಷೆ ಮಾಡಿದ್ದು, ಸದರಿ ವರದಿಯ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?